ಅಧ್ಯಕ್ಷರು.—ಶ್ರೀ ಎಸ್.ಡಿ. ಜಯರಾಮ್‌ರವರು.....ಆಬ್ಸೆಂಟ್ ;

ಶ್ರೀ ವೆಂಕಟರಾಮಯ್ಯನವರು, ನಿಮ್ಮ ಪ್ರಶ್ನೆಯನ್ನು ಮುಂದಕ್ಕೆ ಹಾಕಲಾಗಿದೆ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು, ೧೯೮೫-೮೬, ೧೯೮೬-೮೭ನೇ ಸಾಲಿನಲ್ಲಿ ನಗರ ಪ್ರದೇಶಗಳಾದ ಬೆಂಗಳೂರು, ಮೈಸೂರು, ಹುಬ್ಬಳ್ಳಿ, ಧಾರವಾಡ, ಬೆಳಗಾಂ, ವಿಜಯಪುರಗಳಲ್ಲಿ ವಸತಿ ಹೀನರಿಂದ ವಸತಿಗಾಗಿ ಬಂದಿರುವ ಅರ್ಜಿಗಳ ಸಂಖ್ಯೆ ಎಷ್ಟು ಎಂದು ಕೇಳಿದ್ದಾರೆ ; ಇಷ್ಟೊಂದು ಮಾಹಿತಿಯನ್ನು ೧೫ ದಿವಸ ಎಂಟು ದಿನಗಳ ಒಳಗೆ ತರಿಸಿಕೊಳ್ಳುವುದು ಕಷ್ಟ ವಾಗುತ್ತದೆ. ಇದರ ಜೊತೆಗೆ ಇತರ ನಗರ ಪ್ರದೇಶಗಳಲ್ಲಿ ವಸತಿ ಹೀನರಿಂದ ಬಂದಿರುವ ಅರ್ಜಿಗಳ ಸಂಖ್ಯೆಯನ್ನು ಕೇಳಿದ್ದಾರೆ. ನಮ್ಮ ರಾಜ್ಯದಲ್ಲಿ ೧೭೧ ನಗರ ಪ್ರದೇಶಗಳು ಇವೆ. ಇವುಗಳ ಮಾಹಿತಿ ಯನ್ನು ಒಂದು ವಾರದಲ್ಲಿ ಹೇಗೆ ತರಿಸುವುದು ? ಮಾನ್ಯ ಅಧ್ಯಕ್ಷರೇ, ಇದನ್ನು ಅನ್‌ಸ್ಟಾರ್ಡ್ ಕ್ವೊಶ್ಚನ್ ಆಗಿ ಮಾಡಿದರೆ ಉತ್ತರವನ್ನು ಕಳುಹಿಸಿಕೊಡುತ್ತೇನೆ.

ಶ್ರೀ ಆರ್. ವೆಂಕಟರಾಮಯ್ಯ.—ಇದು ಸ್ಟಾರ್ಡ್ ಕ್ವೊಶ್ಚನ್ ಆಗಿಯೇ ಇರಲಿ.

ಅಧ್ಯಕ್ಷರು.—ಅನ್ ಸ್ಟಾರ್ಡ್ ಕ್ವೊಶ್ಚನ್ ಮಾಡಿದರೂ ಹಾಫ್ ಆನ್ ಹವರ್ ಡಿಸ್ಕಷನ್‌ಗೆ ಅವಕಾಶ ಇದೆ.

ಶ್ರೀ ಎಂ. ಪುಲ್ಲಿಕಾರ್ಜುನ ಖಿರ್ಗೆ.—ಅವಕಾಶ ಸಿಗುವುದೇ ಕಷ್ಟ ಇದೆ.

ಶ್ರೀ ಆರ್. ವೆಂಕಟರಾಮಯ್ಯ.—ಅಧ್ಯಕ್ಷರೇ, ಒಂದು ಕೆಲಸ ಮಾಡಲಿ, ಕಾರ್ಪೊರೇಷನ್‌ಗಳ ವಿರಯಾಗಳ ಮಾಹಿತಿಯನ್ನೇ ಕೊಡಲಿ.

ಅಧ್ಯಕ್ಷರು.—ವೆಂಕಟರಾಮಯ್ಯನವರೇ ತಾವು ಕುಳಿತುಕೊಳ್ಳಿ, ನಾನು ಹೇಳುತ್ತೇನೆ.

ಬೆಳಗಾಂ ಜಿಲ್ಲೆ, ಚಿಕ್ಕೋಡಿ ತಾಲ್ಲೂಕಿನ ಪಡ್ಲಿಹಾಳ್ ಹಾಗೂ ಮಮ್ಮಾದಾಪುರ್ ಗ್ರಾಮಗಳಿಗೆ ಸಣ್ಣ ನೀರು ಸರಬರಾಜು ಯೋಜನೆ

೬೩೪ ಶ್ರೀ ವೀರ ಕಂಬಾರ ಎ. ಪಾಟೀಲ್ (ನಿಪ್ಪಾಣಿ).—ಮಾನ್ಯ ಗ್ರಾಮೀಣಾಭಿವೃದ್ಧಿ ವಸತಿ ಹಾಗೂ ವಕ್ಫ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ತಾಲ್ಲೂಕಿನ ಪಡ್ಲಿಹಾಳ ಮತ್ತು ಮಮ್ಮದಾಪುರ ಗ್ರಾಮಗಳ ಕಿರು ನೀರು ಸರಬರಾಜು ಯೋಜನೆಗಳಿಗೆ ನಿಗದಿ ಮಾಡಿದ ಹಣವೆಷ್ಟು ?

ಆ) ಈ ಯೋಜನೆಗಳ ಕೆಲಸವನ್ನು ಯಾವಾಗ ಪ್ರಾರಂಭಿಸಲಾಯಿತು ಮತ್ತು ಇಲ್ಲಿಯವರೆಗೆ ಮಾಡಿರುವ ಖರ್ಚೆಷ್ಟು ?

ಇ) ಕೆಲವು ಕಾಲದ ಹಿಂದೆ ಈ ಕೆಲಸಗಳನ್ನು ನಿಲ್ಲಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಈ) ಹಾಗಿದ್ದಲ್ಲಿ ಅದಕ್ಕೆ ಕಾರಣಗಳೇನು ?

ಉ) ಕೆಲಸವನ್ನು ಶುರು ಮಾಡಿ ಬೇಗನೆ ಮುಗಿಸುವುದಕ್ಕೆ ಸರ್ಕಾರವು ಶೀಘ್ರ ಕ್ರಮವನ್ನು ತೆಗೆದುಕೊಳ್ಳಲಾಗುವುದೆ ?

ಶ್ರೀ ಅಬ್ದುಲ್ ನಜೀರ್ ಸಾಬ್ (ಗ್ರಾಮೀಣಾಭಿವೃದ್ಧಿ, ವಸತಿ ಹಾಗೂ ವಕ್ಫ್ ಮಂತ್ರಿಗಳು).—

ಅ) ೧) ಪಡ್ಲಿಹಾಳ ಕಿರು ನೀರು ಸರಬರಾಜು ಯೋಜನೆಗೆ ರೂ. ೭೦,೮೦೦

೨) ಮಮ್ಮದಾಪುರ ಕಿರು ನೀರು ಸರಬರಾಜು ಯೋಜನೆಗೆ ರೂ. ೯೨,೧೦೦

ಆ)	ಯೋಜನೆ	ಪ್ರಾರಂಭಿಸಿದ ದಿನಾಂಕ	ಇದುವರೆಗೆ ಆಗಿರುವ ಖರ್ಚು
೧	ಪಡ್ಲಿಹಾಳ	೪-೧೨-೧೯೮೬	ರೂ. ೫೪,೪೪೭
೨	ಮಮ್ಮದಾಪುರ	ಸೆಪ್ಟೆಂಬರ್ ೧೯೮೬	ರೂ. ೪೬,೫೫೮

೧) ಪಡ್ಲಿಹಾ — ಹೌದು

೨) ಮಮದಾಪುರ — ಕೆಲಸವನ್ನು ನಿಲ್ಲಿಸಿರುವುದಿಲ್ಲ.

ಈ) ೧ ಪಡ್ಲಿಹಾಳ : ದಿನಾಂಕ ೧೨-೧೨-೧೯೮೬ ರಿಂದ ಸ್ಥಳೀಯ ವಿವಾದಗಳ ಕಾರಣ ಹಾಗೂ ಪಡ್ಲಿಹಾಳ ವಿವಿದೋದ್ದೇಶ ಸಹಕಾರ ಸಂಘ ನಿಯಮಿತ, ಹಾಕಿರುವ ದಾವೆಯ ಕಾರಣದಿಂದಾಗಿ, ಕೆಲಸವನ್ನು ನಿಲ್ಲಿಸಲಾಗಿದೆ.

೨ ಮಮದಾಪುರ : ಕೆಲಸವು ಪ್ರಗತಿಯಲ್ಲಿರುತ್ತದೆ. ಕೆಲಸವನ್ನು ನಿಲ್ಲಿಸಿರುವುದಿಲ್ಲ.

ಉ) ೧ ಪಡ್ಲಿಹಾಳ : ಹೌದು, ಈ ಪ್ರಕರಣವು ನ್ಯಾಯಾಲಯದ ಮುಂದೆ ಇದ್ದು ಇದು ವಾದಕೂಡಲೆ ಸೂಕ್ತ ಕ್ರಮ ಕೈಗೊಳ್ಳಲಾಗುವುದು.

೨ ಮಮದಾಪುರ ಯೋಜನೆಯನ್ನು ೧೯೮೭ರ ಮಾರ್ಚ್ ಅಂತ್ಯದ ವೊಂದಲೇ ಪೂರ್ಣ ತೀರ್ಮಾನ ಗೊಳಿಸಲಾಗುವುದು.

SRI VEERKUMAR A. PATIL.—Regarding padlihal Mini-water Supply Scheme, the Hon'ble Minister has stated that the matter is before the Court. But, I cannot understand why this should enter the Court. They are supplying water only to the rich people, and giving water to only houses and not through general taps.

Regarding Mamdapur Mini-water Supply Schem, the Hon'ble Minister has stated that the Scheme will be completed by March 87. Sir, there is a very old temple in Mamdapur village. It is the oldest temple in our area and I request the Hon'ble Minister to give one tap near the temple.

SRI ABDUL NAZIR SAB.—Sir, as far as Padlihal is concerned, there is a dispute between the Co-operative Society which was supplying water and the villagers. The Government has sanctioned the Mini-Water Supply Scheme and it has come to the completion stage and if the stay is vacated, immediately I will instruct my Officers to see that Mini-Water Supply Scheme is commissioned as early as possible. As regards Mamdapur Mini-Water Supply Scheme, there is some difficulty in getting electricity connections. Again I will write to S.E. to see that eletricity connection is given by K.E.B. so that the water supply to mamdapur is ensured.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಪ್ರಶ್ನೆಗೆ ಸಂಬಂಧಪಟ್ಟ ಹಾಗೆ ಮಾನ್ಯ ಮಂತ್ರಿಯವರು ಈಗಾಗಲೇ ಉತ್ತರವನ್ನು ಕೊಟ್ಟಿದ್ದಾರೆ. ನಾನು ಜನರಲ್ ಆಗಿ ಒಂದು ವಿಚಾರವನ್ನು ತಮ್ಮಲ್ಲಿ ಕೇಳಿಕೊಳ್ಳುತ್ತಿದ್ದೇನೆ. ಈ ಮಿನಿವಾಟರ್‌ಸಪ್ಲೈ ಸ್ಕೀಮ್‌ನ್ನು ಅನೇಕ ಕಡೆಗಳಲ್ಲಿ ಕಾರ್ಯಗತ ಮಾಡಿದ್ದೀರಿ. ಆದರೆ ಅವುಗಳು ಸರಿಯಾಗಿ ನಡೆಸಲ್ಪಡುತ್ತಿಲ್ಲ. ಸರಿಯಾಗಿ ಸಕಾಲದಲ್ಲಿ ರಿಪೇರಿ ಕಾರ್ಯ ನಡೆಯುತ್ತಾ ಇಲ್ಲ. ಡೆಪ್ಯುಟಿ ಕಮೀಶನರ್‌ರವರಿಗೆ ಕೇಳಿದಾಗ, ಮಿನಿವಾಟರ್‌ಸಪ್ಲೈ ಸ್ಕೀಮ್‌ಗೆ ಮೇಂಟೆನೆನ್ಸ್‌ಗೆ ಹಣ ಇಲ್ಲ ಎಂದು ಹೇಳುತ್ತಾರೆ. ಹೀಗಾಗಿ ಅನೇಕ ಕಡೆಗಳಲ್ಲಿ ಅವುಗಳು ನಿಂತು ಹೋಗಿವೆ. ಈಗ ಅಂತಹ ಕೆಟ್ಟು ಹೋದವುಗಳನ್ನು ರಿಪೇರಿ ಮಾಡುವುದಕ್ಕೆ ಸರಕಾರದ ಕಡೆಯಿಂದ ಎಲ್ಲಾ ಕಡೆಗಳಿಗೂ ಹಣವನ್ನು ಒದಗಿಸಿಕೊಡುತ್ತೀರಾ ?

ಶ್ರೀ ಅಬ್ದುಲ್ ನಜೀರ್‌ಸಾಬ್.— ಮಾನ್ಯ ಸದಸ್ಯರು ಹೇಳುತ್ತಿರುವ ಮಾತುಗಳು ಸತ್ಯವಾದುವು. ಈಗ ಬಜೆಟ್‌ನಲ್ಲಿ ಮಿನಿವಾಟರ್‌ಸಪ್ಲೈ ಸ್ಕೀಮ್‌ನ ಮೆಂಟೇನೆನ್ಸ್‌ಗೆ ಹಣವನ್ನು ಇಟ್ಟಿರಲಿಲ್ಲ ;

ಪಂಚಾಯತ್‌ಗಳಲ್ಲಿ, ತಾಲೂಕುಬೋರ್ಡ್‌ಗಳಲ್ಲಿ ಬೇರೆ ಹಣ ಇದ್ದರೆ, ಅದರ ಮೂಲಕ ರಿಪೇರಿ ಕಾರ್ಯ ಮಾಡಿಸಬೇಕೆಂದು ಇತ್ತು. ಈಗ ಈ ತೊಂದರೆಯನ್ನು ನಿವಾರಣೆ ಮಾಡಲು ಜಿಲ್ಲಾಪರಿಷತ್‌ಗಳಿಗೆ ಅದಕ್ಕಾಗಿ ಬೇರೆ ಹಣವನ್ನು ಕೊಟ್ಟಿರುವುದರಿಂದ ಮುಂದೆ ಇಂತಹ ತೊಂದರೆಯಾಗುವುದಿಲ್ಲ ಎಂದು ನಾನು ಹೇಳಬಯಸುತ್ತೇನೆ.

ಶ್ರೀ ಕೆ.ಜೆ. ಜಾರ್ಜ್ (೨೫೩)— ಗೈರು ಹಾಜರು

ಶ್ರೀ ಕೆ. ವೆಂಕಟೇಶ್ (೨೫೪)— ಗೈರು ಹಾಜರು

ಶ್ರೀ ಎಂ. ರಾಮಪ್ಪ (೨೫೫)— ಗೈರು ಹಾಜರು

ಶ್ರೀ ಪಿ.ಸಿ. ಸಿದ್ದನಗೌಡ (೨೫೬) ಇವರ ಪ್ರಶ್ನೆಯನ್ನು ಮುಂದಕ್ಕೆ ಹಾಕಲಾಗಿದೆ.

ಮಂಗಳೂರು ತಾಲ್ಲೂಕಿನಲ್ಲಿ ನಿವೇಶನರ ಹಿತರಿಗೆ ಮನೆ ನಿವೇಶ ನಹಂಚಿಕೆ ಕುರಿತು.

೩೫೮. ಶ್ರೀ ಬಿ. ಎಂ. ಇದಿನಬ್ಬ (ಉಳ್ಳಾಲ).—ಮಾನ್ಯ ಗ್ರಾಮಾಣಾಭಿವೃದ್ಧಿ ಪಂಚಾಯತ್ ರಾಜ್ ಮತ್ತು ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಮಂಗಳೂರು ತಾಲ್ಲೂಕಿನಲ್ಲಿ ೧೯೮೪-೮೫ ಮತ್ತು ೧೯೮೫-೮೬ನೇ ಡಿಸೆಂಬರ್ ಆಖೈರ್ ವರೆಗೆ ಎಷ್ಟು ಜನ ನಿವೇಶನ ರಹಿತರಿಗೆ ನಿವೇಶನ ಕೊಡಲಾಗಿದೆ ?

ಆ) ಇನ್ನು ನಿವೇಶನ ಹಂಚಿಕೆಗೆ ಬಾಕಿ ಉಳಿದಿರುವ ಅರ್ಜಿಗಳೆಷ್ಟು ?

ಇ) ಬಾಕಿ ಉಳಿದ ಅರ್ಜಿಗಳ ಪೂರ್ತಿ ವಿಲೇವಾರಿ ಯಾವಾಗ ಮುಗಿಸಲಾಗುವುದು ?

ಶ್ರೀ ಅಬ್ದುಲ್ ನಜೀರ್ ಸಾಬ್ (ಗ್ರಾಮಾಣಾಭಿವೃದ್ಧಿ ಪಂಚಾಯತ್ ರಾಜ್ ಮತ್ತು ವಸತಿ ಸಚಿವರು).—

ಅ)

ವರ್ಷ	ಹಂಚಲಾದ ನಿವೇಶನಗಳು
೧೯೮೪-೮೫	೬೪೩
೧೯೮೫-೮೬	೪೦೨
ಒಟ್ಟಿಗೆ	೧೦೪೫

ಆ) ೨೧೦೪

ಇ) ಬಾಕಿ ಇರುವ ಅರ್ಜಿಗಳ ವಿಲೇವಾರಿಯನ್ನು ಆದಷ್ಟು ಶೀಘ್ರವಾಗಿ ಮಾಡಲಾಗುವುದು.

ಶ್ರೀ ಬಿ. ಎಂ. ಇದಿನಬ್ಬ.—ಸನ್ಮಾನ್ಯ ಅಧ್ಯಕ್ಷರೇ, ತಾಲ್ಲೂಕಿನಲ್ಲಿ ಇನ್ನೂ ಎರಡು ಸಾವಿರಕ್ಕೂ ಹೆಚ್ಚಿಗೆ ನಿವೇಶನ ಹಂಚಿಕೆಗಾಗಿ ಬಾಕಿ ಉಳಿದಿರುವ ಅರ್ಜಿಗಳು ಇವೆ. ಈ ಕುರಿತು ಸಂಬಂಧಪಟ್ಟ ಆಫೀಸರ್ಸ್ ಹತ್ತಿರ ಹೋದರೆ ಅವರುಗಳು ಸರಿಯಾಗಿ ಅರ್ಜಿದಾರರ ಸಿಗಾ ತೆಗೆದುಕೊಳ್ಳುವುದಿಲ್ಲ. ಹೀಗಾಗಿ ನಿವೇಶನ ರಹಿತ ಅರ್ಜಿದಾರರು ಪದೇ ಪದೇ ಕಚೇರಿಗೆ ಹೋಗುವುದು, ವಾಪಸ್ಸು ಬರುವುದು, ಆಗಿದೆ, ಇದರಿಂದಾಗಿ ಆ ಬಡಜನರಿಗೆ ತೊಂದರೆಯಾಗಿದೆ. ಆದುದರಿಂದ ಬಾಕಿ ಉಳಿದಿರುವ ಅರ್ಜಿಗಳ ಪೂರ್ತಿ ವಿಲೇವಾರಿಯನ್ನು ಆದಷ್ಟು ಬೇಗ ಮಾಡಿ ಮುಗಿಸುತ್ತೀರಾ ?

ಶ್ರೀ ಅಬ್ದುಲ್ ನಜೀರ್ ಸಾಬ್.—ನಿವೇಶನ ರಹಿತ ಅರ್ಜಿದಾರರಿಗೆ ಆಲ್ಲಿ ಸರಕಾರಿ ಜಾಗ ಇದ್ದರೆ, ಮಾರ್ಚ್ ತಿಂಗಳ ಒಳಗಾಗಿ ಹಂಚಬೇಕು ಎಂದು ಆದೇಶ ಕೊಟ್ಟಿದ್ದೇನೆ. ಹಾಗೆಯೇ ಇನ್ನೂ ಯಾರು ಅರ್ಜಿ ಸಲ್ಲಿಸಲಿದ್ದಾರೆ, ಯಾರು ನಿವೇಶನ ರಹಿತರಿದ್ದಾರೆ, ಅಂತಹವರಿಗೆ, ಕೂಡ ನಿವೇಶನ ಹಂಚುವ ಕಾರ್ಯವನ್ನು ಮಾಡಬೇಕೆಂದು ಆದೇಶಿಸಿದ್ದೇನೆ. ನೂತನವಾಗಿ ಫಲಾನುಭವಿಗಳನ್ನು ಗುರುತಿಸಿದ ನಂತರ ಅಂತಹವರಿಗೆ ಕೂಡಲೇ ನಿವೇಶನಗಳನ್ನು ಹಂಚುವ ಬಗ್ಗೆ ಕೂಡ ಸೂಕ್ತ ಕ್ರಮವನ್ನು ತೆಗೆದುಕೊಳ್ಳುತ್ತೇನೆ.